ಒ.ಎಸ್.ನಂಬ್ರಃ 68/2024
ಪಿ.ಡಬ್ಲ್ಯೂ ಃ 01

ದಿನಾಂಕಃ 18-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರಿದ ಪಾಟೀ ಸವಾಲು ಃ **4 ನೇ ಪ್ರತಿವಾದಿ ಪರ ಶ್ರೀ ಸಿ ಎಸ್ ಹೆಚ್ ವಕೀಲರಿಂದ**

ನಿಪಿ.2 ಮತ್ತು 3 ರ ಪತ್ರದಲ್ಲಿ ದಿನಾಂಕ 20-07-2013 ರಂತೆ ಪತ್ರಕ್ಕೆ ಉತ್ತರಿಸುವರೇ ಎಂದು ನಮೂದಿಸಿರುವ ಬಗ್ಗೆ ಸದರಿ 20-07-2013 ರ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ, ಅದು ನನ್ನ ಬಳಿ ಇರುತ್ತದೆ. ಮನೆಯಲ್ಲಿ ಇರುವ ಬಗ್ಗೆ ಪರಿಶೀಲಿಸುತ್ತೇನೆ ಎಂದು ನುಡಿಯುತ್ತಾರೆ. ನಿಪಿ.4, ಸರ್ವೆ ನಂಬ್ರ 172/1 ಎ ಕುಮ್ಕಿ ಹಕ್ಕಿನ ನಕಾಶೆ ಎಂದು ನುಡಿಯುತ್ತಾರೆ. ನಿಪಿ.5 ಪಹಣಿ ಪತ್ರಿಕೆ ಪುರುಷೋತ್ತಮ ಬಿನ್ ನರಸಿಂಹ ಮಧ್ಯಸ್ಥರವರಿಗೆ ಸಂಬಂದಪಟ್ಟಿದ್ದು. ನಿಪಿ.5 ನನಗೆ ಸಂಬಂದಪಟ್ಟ ದಾಖಲೆ ಆಗಿರುವುದಿಲ್ಲ. ನಿಪಿ.6 ಪಹಣಿ ಪತ್ರಿಕೆ ನರಸಿಂಹ ಮಧ್ಯಸ್ಥರವರಿಗೆ ಸಂಬಂದಪಟ್ಟಿರುತ್ತದೆ. ನಿಪಿ.7 ರ ದಾಖಲೆ ಜನಾರ್ದನ ಮಧ್ಯಸ್ಥರವರಿಗೆ ಸಂಬಂದಪಟ್ಟಿರುತ್ತದೆ. ನಿಪಿ.5 ರಿಂದ 7 ನನಗೆ ಸಂಬಂದಪಟ್ಟಿರುವುದಿಲ್ಲ.

2. ಪಟ್ಟಣ ಪಂಚಾಯತಿಯವರು ನನಗೆ ಯಾಕೆ ನೋಟೀಸು ಕೋಟ್ಟಿದ್ದರು ಎಂದು ಈಗ ನನಗೆ ನೆನಪಿರುವುದಿಲ್ಲ. ದಾವಾ ಸ್ವತ್ತಿನ ಬಿ ಶೆಡ್ಯೂಲ್ ಸ್ವತ್ತಿಗೆ ನನ್ನ ಕಡೆಯಿಂದ ಯಾವ ತೊಂದರೆ ಆಗಿ ಸಾರ್ವಜನಿಕರು ಪಟ್ಟಣ ಪಂಚಾಯತಿಗೆ ದೂರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ, ಬಿ ಶೆಡ್ಯೂಲಿನಲ್ಲಿ ಸಾರ್ವಜನಿಕರ ರಸ್ತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಬಿ ಶೆಡ್ಯೂಲ್ ಸ್ವತ್ತಿಯಲ್ಲಿರುವ ಸಾರ್ವಜನಿಕರ ರಸ್ತೆಗೆ ತಾವು ಅಡ್ಡಿಪಡಿಸಿದ ಮೇರೆಗೆ ಎಷ್ಟು ಜನ ಸಾರ್ವಜನಿಕರು ಪಟ್ಟಣ ಪಂಚಾಯತಿಗೆ ದೂರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅಲ್ಲಿ ರಸ್ತೆಯೇ ಇರುವುದಿಲ್ಲ, ನಾನು ಅಡ್ಡಿ ಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಜನರ ವಿರುದ್ದ ದೂರಿಗೆ ಸಂಬಂದಪಟ್ಟಂತೆ ಕ್ರಿಮಿನಲ್ ಪ್ರಕರಣ ಸಲ್ಲಿಸಿರುತ್ತೀರಾ ಎಂದರೆ ಯಾವುದೇ ಕ್ರಿಮಿನಲ್ ಪ್ರಕರಣ ನಾನು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆ ಬಿ ಸ್ವತ್ತಿಗೆ ಸಂಬಂದಪಟ್ಟಂತೆ ಉಮ್ಮಕ್ಕಿ ಬೈಲು ನಿವಾಸಿಗಳ ವಿರುದ್ದ ಎಷ್ಟು ದಾವಾ ಸಲ್ಲಿಸಿರುತ್ತೀರಾ ಎಂದರೆ ನಾನು ಯಾವುದೇ ದಾವೆ ದಾಖಲಿಸಿರುವುದಿಲ್ಲ, ಬೇರೆಯವರು ನನ್ನ ವಿರುದ್ದ ದಾವೆ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

3. ದಾವಾ ಎ ಶೆಡ್ಯಾಲ್ ಸರ್ವೆ ನಂಬ್ರ 174/8 ರ ಚಕ್ಕುಬಂದಿ ಉತ್ತರಕ್ಕೆ ಒಂದು ಓಣಿ, ದಕ್ಷಿಣಕ್ಕೆ ಕುಮ್ಕಿ ಹಕ್ಕಿನ ಮತ್ತೊಂದು ಭಾಗ ಅದೇ ಸರ್ವೆ ನಂಬರಿನದ್ದು, ಸಾಕ್ಷಿ ಪುನಃ ಪಶ್ಚಿಮಕ್ಕೆ ಕುಮ್ಕಿ ಹಕ್ಕಿನ ಮತ್ತೊಂದು ಭಾಗ/ನಮ್ಮ ಉಳಿದ ಭಾಗ, ದಕ್ಷಿಣಕ್ಕೆ ನೀರು ತೋಡು, ಪೂರ್ವಕ್ಕೆ ನಮ್ಮ ಎ ಶೆಡ್ಯೂಲ್ ಸ್ವತ್ತು ಎಂದು ನುಡಿಯುತ್ತಾರೆ. ಅದೇ ರೀತಿ ದಾವಾ ಬಿ ಶೆಡ್ಯೂಲ್ ಸರ್ವೆ

ನಂಬ್ರ 172/1 ಎ ಇದರ ಚಕ್ಕುಬಂದಿ ಹೇಳುತ್ತೀರಾ ಎಂದರೆ ಸಾಕ್ಷಿ ಈಗ ಮೇಲೆ ಹೇಳಿರುವುದು ಅದೇ ಎಂದು ನುಡಿಯುತ್ತಾರೆ. ನನಗೆ ನನ್ನ ಸರ್ವೆ ನಂಬ್ರ ಗಡಿ ಗುರುತು ಗೊತ್ತಿಲ್ಲದೇ ಇದ್ದರೂ ಸಹ ಸರಕಾರಿ ಜಾಗವನ್ನು ನನ್ನದು ಎಂದು ಹೇಳಿ ಆತಂಕ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಪಟ್ಟಣ ಪಂಚಾಯತಿಯವರು ಸರ್ವೆ ಇಲಾಖೆಗೆ ಅರ್ಜಿ ಕೊಟ್ಟು ಸರ್ವೆ ಕೆಲಸ ಮಾಡಲು ಸರ್ವೇಯರ್ ಅನ್ನು ಸ್ಥಳಕ್ಕೆ ಕರೆಯಿಸಿದಾಗ ನಾನು ಅವರ ವಿರುದ್ದ ಗಲಾಟೆ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ನ್ಯಾಯಾಲಯದಲ್ಲಿ ದಾವೆ ಇರುವಾಗ ಮಾಡಬಾರದು ಎಂದು ಹೇಳಿ ಕಳುಹಿಸಿರುತ್ತೇನೆ ಎಂದು ನುಡಿಯುತ್ತಾರೆ.

4. ಸರಕಾರದವರು ಸರ್ವೆ ನಂಬ್ರ 172/1 ಎ ಗೆ ಸಂಬಂದಪಟ್ಟಂತೆ ಯಾವುದಾದರೂ ಇಲಾಖೆಗೆ ನೋಟೀಸು ಕೊಟ್ಟಿದ್ದಾರಾ ಎಂದರೆ ಸಾಕ್ಷಿ, ಇಲ್ಲ ಎಂದು ನುಡಿಯುತ್ತಾರೆ. ಬಿ ಶೆಡ್ಯೂಲಿಗೆ ಸಂಬಂದಪಟ್ಟಂತೆ ಈ ದಾವೆಯನ್ನು ಹೊರುತುಪಡಿಸಿ ಸರಕಾರದ ವಿರುದ್ದ ಬೇರೆ ಯಾವುದಾದರೂ ದಾವೆಯನ್ನು ದಾಖಲಿಸಿದ್ದೀರಾ ಎಂದರೆ ಸಾಕ್ಷಿ, ಯೋಚಿಸುತ್ತಾ ಇದೇ ಹಾಕಿರುವುದು ಎಂದು ನುಡಿಯುತ್ತಾರೆ. (ಪುನಃ ಹೈ ಕೋರ್ಟಿನಲ್ಲಿ ಇದೆ ಎಂದು ನುಡಿಯುತ್ತಾರೆ). ಹೈ ಕೋರ್ಟಿನಲ್ಲಿ ಇದ್ದಂತಹ ದಾಖಲೆಯನ್ನು ಹಾಜರುಪಡಿಸಬಹುದಾ ಎಂದರೆ ಸಾಕ್ಷಿ, ಯೋಚಿಸುತ್ತಾ ಈಗಾಗಲೇ ನಮ್ಮ ವಕೀಲರು ಕೆಲವೊಂದು ದಾಖಲೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಬಿ ಶೆಡ್ಯೂಲ್ ದಾವೆಗೆ ಸಂಬಂದಪಟ್ಟಂತೆ ಸರಕಾರದವರು ನನ್ನ ವಿರುದ್ದ ಯಾವುದೇ ದಾವೆ ಸಲ್ಲಿಸಿರುವುದಿಲ್ಲ.

ಈ ಸಂದರ್ಭದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ